Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 Zone 1, R. I. Dist. 3182 Charter Date : 04-03-1986



THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Dr. Anulekha Bayari
Bulletin Editor

Volume 39 Issue - 39 20th March 2025

## CLASSIFICATION TALK

By
Rtn Anil Dsilva

"ಪ್ರಸ್ತುತ ಕಾಲದಲ್ಲಿ ವಿಮೆಯ ಅಗತ್ಯತೆ"

Time : 7.00 p.m.
Venue : Hotel Shivaprasad Grand, Kundapura

39th year of Service and Fellowship

## ವಾರದ ವರದಿ







ತಾ. 13–03–2025ರ ನಮ್ಮ ಸಾಪ್ತಾಹಿಕ ಸಭೆಯು ಹೋಟೆಲ್ ಶಿವಪ್ರಸಾದ್‌ನ ಸಭಾಂಗಣದಲ್ಲಿ ನಡೆಯಿತು. ತಾ. 08–03–2025ರಂದು ನಡೆದ ವಿಶ್ವ ಮಹಿಳಾ ದಿನಾಚರಣೆಯ ಭಾಗವಾಗಿ ಇಂದಿನ ಸಭೆಗೆ ಮುಖ್ಯ ಅತಿಥಿಯಾಗಿ ಬೆಂಗಳೂರಿನ ಮಹಿಳಾ ಉದ್ಯಮಿ ಹಾಗೂ KLAUZ Specialities ಸಂಸ್ಥೆಯ ನಿರ್ದೇಶಕಿಯಾಗಿರುವ ಶ್ರೀಮತಿ ವೃಂದಾ ಲೂಯಿಸ್‌ರವರು 'ಮಹಿಳಾ ಸಬಲೀಕರಣ'ದ ಬಗ್ಗೆ ನಮ್ಮ ಮಹಿಳೆಯರನ್ನು ಹುರಿದುಂಬಿಸಲು ಆಗಮಿಸಿದ್ದರು. ಅತಿಥಿಗಳನ್ನು ವೇದಿಕೆಗೆ ಆಮಂತ್ರಿಸಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು, ಅತಿಥಿಗಳಿಗೆ ಮತ್ತು ಆಗಮಿಸಿದ ದೊಡ್ಡ ಸಂಖ್ಯೆಯ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದರು. ರೊ. ಶ್ರೀನಿವಾಸ್ ಶೇಟ್‌ರವರು ಪ್ರಾರ್ಥನೆಯ ಮೂಲಕ ಸಭೆಗೆ ಚಾಲನೆಯನ್ನು ನೀಡಿದರು. ಕಳೆದ ವಾರದ ವರದಿಯನ್ನು ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ಸಭೆಗೆ ನೀಡಿದರು. ವಾರದ ಚಿಂತನೆಯನ್ನು ನೀಡಿದ ರೊ. ಸುರೇಖಾ ಪುರಾಣಿಕ್‌ರವರು ಮಹಿಳೆಯರು ಇಂದು ಕಛೇರಿಯಲ್ಲಿ ದುಡಿದು ಮನೆಗೆ ಬಂದು ಮನೆಯ ದೈನಂದಿನ ಕಾರ್ಯಗಳು ಹಾಗೂ ಕುಟುಂಬದ ಕಾರ್ಯವೆಸಗುವಾಗ ಉಪಚಾರದ ಮಾತುಗಳಿಗಿಂತ ಆತ್ಮಸ್ಥೈರ್ಯದ ಮಾತುಗಳು ಕುಟುಂಬಸ್ಥರಿಂದ ಕೇಳಿಬಂದರೆ, ಅವು ಆಕೆಗೆ ಸ್ಫೂರ್ತಿಯನ್ನು ನೀಡುತ್ತದೆ ಎಂದರು. ರೋಟರಿ ಮಾಹಿತಿ ನೀಡಿದ ರೊ. ಕೆ. ಕೆ. ಕಾಂಚನ್‌ರವರು ರೋಟರಿಯ ಇತಿಹಾಸದಲ್ಲಿ ಮ್ಯಾಗಝಿನ್‌ನ ಬಗ್ಗೆ ತಿಳಿಸುತ್ತಾ, ಪ್ರಥಮ ಮ್ಯಾಗಝಿನ್ ರೋಟರಿಯಲ್ಲಿ ಹುಟ್ಟಿದ್ದು 1911ರಲ್ಲಿ. ನಮ್ಮ ಕ್ಲಬ್ಬಿನ ವಾರಪತ್ರಿಕೆ 'ಜಾಸ್ಮಿನ್' ಕಳೆದ ಮೂರು ದಶಕಗಳಿಂದ ನಾವು ನಡೆಸಿಕೊಂಡು ಬಂದಿರುವುದು ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಇದೊಂದು ದೊಡ್ಡ ಸಾಧನೆ ಎಂದರು. ನಂತರ ಮುಖ್ಯ ಅತಿಥಿಗಳ ಪ್ರೌಢ ಶಿಕ್ಷಣದಲ್ಲಿ ಹಾಗೂ ಕಾಲೇಜಿನಲ್ಲಿ ಸಹಪಾಠಿಯಾಗಿದ್ದ ಗೆಳೆಯ ರೊ. ಮಹೇಂದ್ರ ಶೆಟ್ಟಿಯವರು ಅತಿಥಿಯವರನ್ನು ಸಭೆಗೆ ಪರಿಚಯಿಸಿದರು. ಮಣಿಪಾಲದ ಎಂಐಟಿಯಲ್ಲಿ ಎಂ.ಟೆಕ್ ಪದವೀಧರೆಯಾಗಿರುವ ಶ್ರೀಮತಿ ವೃಂದಾ ಲೂಯಿಸ್‌ರವರು ಮುಂಬೈ ಐಐಟಿಯ ಪದವೀಧರ ಹಾಗೂ ಅಮೇರಿಕಾದಲ್ಲಿ ಎಂಎಸ್. ಪದವಿಯನ್ನು ಪಡೆದ ಪತಿ ಶ್ರೀ ವಿವಿಯನ್ ಲೂಯಿಸ್‌ರವರಿಗೆ ಅಮೇರಿಕಾದಲ್ಲಿ ಬಹಳಷ್ಟು ಅವಕಾಶಗಳಿದ್ದರೂ ಭಾರತದಲ್ಲೇ ಉದ್ಯಮವನ್ನು ಸ್ಥಾಪಿಸಲು ಪ್ರೇರೇಪಿಸಿದ ಶ್ರೀಮತಿ ವೃಂದಾ ಲೂಯಿಸ್‌ರನ್ನು ಶ್ಲಾಘಿಸಿದರು. ನಂತರ ಮಹಿಳಾ ಸಬಲೀಕರಣದ ವಿಚಾರದಲ್ಲಿ ಮಾತನಾಡಿದ ಶ್ರೀಮತಿ ವೃಂದ ಲೂಯಿಸ್‌ರವರು ಮಹಿಳಾ ಸಬಲೀಕರಣದ ವ್ಯಾಖ್ಯೆಯ ಬಗ್ಗೆ ವಿಶ್ಲೇಷಣೆ ನಡೆಸುತ್ತಾ, ಸಬಲೀಕರಣವೆಂದು ಹೇಳುವ ಬದಲು ಸ್ವ ಬಲಕರಣವೆಂದರೆ ಹಾಗೂ ಇಂಗ್ಲಿಷ್‌ನ EMPOWERನ ಪ್ರಥಮ ಎರಡು ಅಕ್ಷರಗಳನ್ನು E Mನ್ನು ತಿರುಗಿಸಿ M E POWER ಮಾಡಿದರೆ, ಅದು ಅರ್ಥಪೂರ್ಣವೆಂದು ವ್ಯಾಖ್ಯಾನಿಸಿದರು. ಪ್ರಪಂಚದ ಮಹಿಳೆಯರಲ್ಲಿ ಪ್ರತಿ ವಿಚಾರದಲ್ಲೂ ಅಪ್ರತಿಮ ಸಾಧಕರಿರುವಾಗ ಅವರಲ್ಲಿ ನಾವು ಯಾರನ್ನಾದರೂ ನಮ್ಮ ಜೀವನದಲ್ಲಿ ಮಾದರಿಯಾಗಿ ತೆಗೆದುಕೊಂಡಲ್ಲಿ ಅದು ನಮಗೆ ದೈನಂದಿನ ಸ್ಫೂರ್ತಿಯಾಗುತ್ತದೆ ಎಂದರು. ತನ್ನ ಜೀವನದಲ್ಲಿ ತಾನು ಶ್ರೀಮತಿ ಇಂದಿರಾ ನೂಯಿ ಹಾಗೂ ಅರುಣಿಮಾ ಸಿನ್ಹಾರವರನ್ನು ಮಾದರಿಯಾಗಿಟ್ಟುಕೊಂಡಿರುವುದರಿಂದ ಕರ್ತವ್ಯ ಬದ್ಧತೆ ಹಾಗೂ ಅಪ್ರತಿಮ ಆತ್ಮವಿಶ್ವಾಸಕ್ಕೆ ಇವರಿಬ್ಬರು ತನಗೆ ಮಾದರಿ ಎಂದರು. ಇಂದು ಪ್ರತಿ ಮಹಿಳೆಯರು ತಮ್ಮ ಜೀವನವನ್ನು ಕುಟುಂಬದಿಂದ ಸಮಾಜದೆಡೆಗೆ ವಿಸ್ತರಿಸಬೇಕು. ಅದು ಸಮಾಜಸೇವೆಯಾಗಿರಬಹುದು, ಅಥವಾ ಸ್ವ ಉದ್ಯಮ ಆಗಿರಬಹುದು ಯಾವುದೇ ಉದ್ಯಮ ನಡೆಸುವುದಾದಲ್ಲಿ ಇಂದು ಪ್ರಥಮ ಹಂತದ ತರಬೇತಿಗಾಗಿ ಯೂಟ್ಯೂಬ್‌ನಲ್ಲಿ SWOT ಪೇಜನ್ನು ತೆರೆದಲ್ಲಿ ನಿಮಗೆ ಬೇಕಾದ ತರಬೇತಿ ರೂ. 500 ರಿಂದ ರೂ. 50,000ದ ತನಕದ ಹಲವಾರು ತರಬೇತಿಯ ವಿಚಾರಗಳು ತಿಳಿಯುತ್ತದೆ. ಇದರಲ್ಲಿ ಪ್ರತೀ ವಿಚಾರದ ಬಗ್ಗೆ Strength, Weakness, Opportunity ಹಾಗೂ Threat ಗಳ ಬಗ್ಗೆ ಉತ್ತಮವಾದ ವಿಶ್ಲೇಷಣೆ ಮಾಡಿದ ಮಾಹಿತಿಯನ್ನು ಪಡೆಯಬಹುದು. ಯಾವುದೇ ಉದ್ಯಮವನ್ನು ಸ್ಥಾಪಿಸುವುದಾದಲ್ಲಿ ಸಣ್ಣ ಹಂತದಿಂದ ಮನೆಯಲ್ಲಿಯೇ ಪ್ರಾರಂಭಿಸಿ, ಅವುಗಳ ಒಳಿತು ಕೆಡುಕುಗಳನ್ನು ಅಭ್ಯಸಿಸಿ, ಮುಂದುವರಿಯಿರಿ ಎಂದು ಹಲವು ಸಲಹೆಗಳನ್ನು ನೀಡಿದರಲ್ಲದೆ, ಅದಕ್ಕೆ ಪೂರಕವಾದ ಕೆಲವು ಉದಾಹರಣೆಗಳನ್ನು ನೀಡಿದರು. ಮುಂದಿನ ವರುಷದೊಳಗೆ ಈ ಕ್ಲಬ್ಬಿನಿಂದ ಯಾರಾದರೂ ಇಬ್ಬರು ಮಹಿಳೆಯರು ಪ್ರೇರಣೆಗೊಂಡು ಮುಂದುವರಿದಲ್ಲಿ ತನ್ನ ಇಂದಿನ ಭೇಟಿ ಸಾರ್ಥಕವಾಗುತ್ತದೆ ಎಂದು ತಿಳಿಸಿದರು. ಮುಂದೆ ಮಾತನಾಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೊನ್ಸಾರವರು ಇಂದಿನ ನಮ್ಮ ಸಭೆಗಾಗಿ ದೂರದ ಬೆಂಗಳೂರಿನಿಂದ ಆಗಮಿಸಿ, ಹಲವಾರು ಉಪಯುಕ್ತ ಮಾಹಿತಿಗಳನ್ನು ನೀಡಿದ ಶ್ರೀಮತಿ ವೃಂದ ಲೂಯಿಸ್‌ರವರಿಗೆ ಕೃತಜ್ಞತೆಯನ್ನು ನೀಡಿದರಲ್ಲದೆ ಕ್ಲಬ್ಬಿನ ವತಿಯಿಂದ ಅವರನ್ನು ಗೌರವಿಸಿದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ನಗೆಹನಿಯನ್ನು ಸಿಡಿಸಿದರು. ರೊ. ಜಾನ್ಸನ್ ಆಲ್ಮೇಡಾರವರು ಲಕ್ಕಿ ರೊಟೇರಿಯನ್ ಆಗಿ ಆಯ್ಕೆಯಾದರು. ರೊ. ದೋಮ ಚಂದ್ರಶೇಖರ್‌ರವರು ಧನ್ಯವಾದವನ್ನು ನೀಡಿದರು. ರಾಷ್ಟ್ರಗೀತೆಯ ನಂತರ ಸಭೆಯನ್ನು ಮುಂದಿನ ವಾರಕ್ಕೆ ವಿಸ್ತರಿಸಲಾಯಿತು.



















## Rotary Information

### Rotary Magazine

First Rotary magazine was started in the year 1911 by Rotary International. But it is not mandatory for every Rotarian.The Regional Rotary magazine is "The Rotary News " published from Chennai. The Rotary News is mandatory for every Rotarians. Our clubs Rotary bulletin is "Jasmine"and it is being published for nearly three decades weekl.

**By Rtn. K. K. Kanchan**

### ಕಳೆದ ವಾರದ ಚಿಂತನೆ

Don't tell mother "She looks tired", she already known that. Tell her she is doing a great job, she may not know that.

ಒಬ್ಬ ಮಹಿಳೆಗೆ ನೀನು ತುಂಬಾ ದುಡಿದು ದಣಿದಿದ್ದೀಯಾ ಆಯಾಸವಾಯಿತೇ..? ಎಂಬ ಉಪಚಾರದ ಮಾತುಗಳಿಗಿಂತ ನೀನೊಂದು ಮಹತ್ಕಾರ್ಯವನ್ನು ಮಾಡಿದ್ದೀಯಾ... ನೀನೆಷ್ಟು ಸಬಲಳು. ಧೈರ್ಯವಂತಳು ಎಂದು ಗುರುತಿಸಿ, ಸ್ಫೂರ್ತಿದಾಯಕ ಮಾತುಗಳನ್ನಾಡುವುದು ಅವಶ್ಯಕವಾಗಿರುತ್ತದೆ.

ನೀಡಿದವರು –

ರೊ.. ಸುರೇಖಾ ಪುರಾಣಿಕ್

Rotary **ರೋಟರಿ ಕ್ಲಬ್ ಕುಂದಾಪುರ ದಕ್ಷಿಣ** THE MAGIC OF ROTARY

**Design Infinity DUBAI**

**ಇವರ ಪ್ರಾಯೋಜಕತ್ವದಲ್ಲಿ**

**ಟೀಮ್ ಈಶ್ವರ್ ಮಲ್ಪೆಯವರ ಸಹಯೋಗದೊಂದಿಗೆ**

**"ಉಚಿತ ಕಿವಿಯ ಶ್ರವಣ ತಪಾಸಣೆ ಮತ್ತು ಉಚಿತ ಶ್ರವಣ ಸಾಧನಗಳ ವಿತರಣೆ"**

**ದಿನಾಂಕ : 22-03-2025 ಸಮಯ : ಬೆಳಿಗ್ಗೆ 9 ರಿಂದ ಸಂಜೆ 4**

**ಸ್ಥಳ : ಕಲಾ ಮಂದಿರ ಬೋರ್ಡ್ ಹೈ ಸ್ಕೂಲ್, ಕುಂದಾಪುರ**

